**ಸಾಕ್ಷಿಗೆ ದಿನಾಂಕ:16-04-2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ವಾದಿ ಪರ ಶ್ರೀ. GNC ವಕೀಲರಿಂದ ::**

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದು, ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. SNM ವಕೀಲರಿಂದ ::**

ನನ್ನ ಸ್ವಂತ ಊರು ಕಣಬಗಟ್ಟೆ ಆಗಿರುತ್ತದೆ. ಸದರಿ ದಾವೆಯನ್ನು ಎಷ್ಟು ಜನ ವಾದಿಗಳು ಎಷ್ಟು ಜನ ಪ್ರತಿವಾದಿಗಳ ವಿರುದ್ದ ಹೂಡಿರುತ್ತಾರೆ ಎಂದು ನನಗೆ ನಿಖರವಾದ ಮಾಹಿತಿ ಇಲ್ಲ. ಸದರಿ ದಾವೆಯಲ್ಲಿ ಏನೆಲ್ಲಾ ಪರಿಹಾರ ಕೋರಲಾಗಿರುತ್ತದೆ ಎನ್ನುವ ಬಗ್ಗೆಯೂ ಸಹ ನನಗೆ ನಿಖರವಾದ ಮಾಹಿತಿ ಇಲ್ಲ. ಸದರಿ ದಾವೆಯನ್ನು ಕಣಬಗಟ್ಟೆ ಗ್ರಾಮದ ಸರ್ವೇ ನಂಬರ್ 39/3 ರಲ್ಲಿನ ಒಂದು ಮುಕ್ಕಾಲು ವಿಸ್ತೀರ್ಣದ ಆಸ್ತಿಯ ಕುರಿತು ಹೂಡಿಲಾಗಿರುತ್ತದೆ. ಸದರಿ ಜಮೀನಿನ ದಕ್ಷಿಣಕ್ಕೆ ಸೋಮಶೇಖರಪ್ಪ ರವರ ಜಮೀನು, ಪಶ್ಚಿಮಕ್ಕೆ ಸಿದ್ದಯ್ಯ ಎನ್ನುವವರು ಜಮೀನು, ಉತ್ತರಕ್ಕೆ ನಂಜುಂಡಪ್ಪ ರವರ ಜಮೀನು, ಪೂರ್ವಕ್ಕೆ ರಸ್ತೆ ಇರುತ್ತದೆ. ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಇರುವ ಕೆಲವು ಅಂಶಗಳು ನನಗೆ ತಿಳಿದಿರುತ್ತದೆ ಆದರೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ವಾದಿ ಹಾಗೂ ಪ್ರತಿವಾದಿಗಳು ಒಂದೇ ಕುಟುಂಬಕ್ಕೆ ಸೇರಿದ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಮಾವ ಗಂಗಾಧರಪ್ಪ ಆಗಿರುತ್ತಾರೆ ಎಂದರೆ ಸರಿ. ಗಂಗಾಧರಪ್ಪ, ಚಂದ್ರಪ್ಪ, ಶಿವಮೂರ್ತಪ್ಪ ಹಾಗೂ ದೇವಿರಪ್ಪ ಎನ್ನುವವರು ಸಹೋದರರಾಗಿರುತ್ತಾರೆ ಎಂದರೆ ಸರಿ. ಗಂಗಾಧರಪ್ಪ ರವರು ಮಕ್ಕಳು ಕೆ ಜಿ ವೀರಣ್ಣ ಹಾಗೂ ಕೆ ಜಿ ಶಿವಕುಮಾರ್ ಆಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು 18.03.1976 ರಂದು ಗಂಗಾಧರಪ್ಪ ರವರು ಕ್ರಯಕ್ಕೆ ಪಡೆದ ಸ್ವತ್ತಾಗಿರುತ್ತದೆ ಎಂದರೆ ಸರಿ. ಸದರಿ ಖರೀದಿಯ ನಂತರದಲ್ಲಿ ಕುಟುಂಬದಲ್ಲಿ ಆದ ಹಿಸ್ಸೆಯ ಅಡಿಯಲ್ಲಿ ದಾವಾ ಆಸ್ತಿಯು ದೇವಿರಪ್ಪ ಬಿನ್ ನಾಗಪ್ಪ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ನಂತರದಲ್ಲಿ ಗಂಗಾಧರಪ್ಪ ರವರು ಮಕ್ಕಳಾದ ಕೆ ಜಿ ವೀರಣ್ಣ ಹಾಗೂ ಕೆ ಜಿ ಶಿವಕುಮಾರ್ ರವರು 1955 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ದಾವಾ ಆಸ್ತಿಯು ಕೆ ಜಿ ಶಿವಕುಮಾರ್ ರವರ ಹಿಸ್ಸೆಗೆ ಬಂದಿರುತ್ತದೆ

ಎಂದರೆ ಸರಿ. ದಾವಾ ಆಸ್ತಿಯ ಖಾತೆಯ ಯಾವುದೇ ಮಾರಾಟ ವಗೈರೆ ಆಗದೇ ಕೇವಲ ಕೈ ಬರವಣಿಗೆ ತಪ್ಪಿನಿಂದ ವಾದಿಯ ತಾಯಿ ಸಾವಿತ್ರಮ್ಮ ಎನ್ನುವವರ ಹೆಸರಿಗೆ ನಮೂದಾಗಿತ್ತು ಎಂದರೆ ಸರಿ. ಅದಕ್ಕೆ ಸಂಬಂಧಪಟ್ಟಂತೆ ತರೀಕೆರೆಯ ಉಪ ವಿಭಾಗಾಧಿಕಾರಿಗಳ ಆದೇಶದಂತೆ ಸದರಿ ತಪ್ಪು ನಮೂದನ್ನು ರದ್ದುಪಡಿಸಲಾಗಿತ್ತು ಎಂದರೆ ಸರಿ. ನಂತರದಲ್ಲಿ ಅಜ್ಜಂಪುರ ತಹಶೀಲ್ದಾರ್ ರವರ ಆದೇಶದಂತೆ ಸ್ಥಳ ತನಿಖೆ ಆಗಿ ದಾವಾ ಆಸ್ತಿಯ ಖಾತೆಯು ಅನ್ನಪೂರ್ಣಮ್ಮ ರವರ ಹೆಸರಿಗೆ ಮತ್ತೆ ನಮೂದು ಆಗಿರುತ್ತದೆ ಎಂದರೆ ಸರಿ. ಸುಮಾರು 40-45 ವರ್ಷಗಳಿಂದ ದಾವಾ ಅಸ್ತಿಯ ಸ್ವಾಧೀನದಲ್ಲಿ ಅನ್ನಪೂರ್ಣಮ್ಮ ರವರ ಕುಟುಂಬಸ್ಥರೆ ಇರುತ್ತಾರೆ ಎಂದರೆ ಸರಿ. ವಾದಿಗಳು ಕಣಬಗಟ್ಟೆ ಗ್ರಾಮದಲ್ಲಿ ವಾಸ ಮಾಡಿಕೊಂಡಿರುತ್ತಾರೆ. ವಾದಿಗಳ ಹೇಳಿಕೆಯ ಮೇರೆಗೆ ವಾದಿಗಳು ಸ್ವಾಧೀನದಲ್ಲಿ ಇರುವುದಾಗಿ ಹೇಳಿ ನನ್ನ ಮುಖ್ಯ ವಿಚಾರಣ ಪ್ರಮಾಣಪತ್ರದಲ್ಲಿ ಬರೆಸಿ ನ್ಯಾಯಾಲಯಕ್ಕೆ ಹೂಡಿರುತ್ತೇನೆ ಎಂದರೆ ಸರಿ. ವಾದಿಗಳು ಹಾಗೂ ಪ್ರತಿವಾದಿಗಳ ಕುಟುಂಬದ ನಡುವೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ಶಿವಕುಮಾರ್ ರವರು ಸೇನೆಯಲ್ಲಿ ಇದ್ದರು ಎಂದರೆ ಸರಿ. 1 ನೇ ಪ್ರತಿವಾದಿಗೆ ಪ್ರಸ್ತುತದಲ್ಲಿ 70 ವರ್ಷ ವಯಸ್ಸಾಗಿರುತ್ತದೆ ಎಂದರೆ ಸರಿ. ಅವರು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: